





FLN Series

# ಅಭ್ಯಾಸ ಪುಸ್ತಕ - I

1ನೇ ತರಗತಿ

ಹೆಸರು: ..............................................................................................

ತರಗತಿ: ..............................................................................................

ಶಾಲೆ: ................................................................................................

## -: ಶಿಕ್ಷಕರಿಗೆ/ಪೋಷಕರಿಗೆ ಸೂಚನೆಗಳು :-

ಈ ಪುಸ್ತಕವು NIPUN ಭಾರತ್ ಮಾರ್ಗಸೂಚಿಯ ಅನ್ವಯ ಮಕ್ಕಳಿಗೆ ವಯೋಮಾನಕ್ಕೆ ತಕ್ಕ ಕಲಿಕಾಂಶಗಳ ಮೇಲೆ ಅಭ್ಯಾಸವನ್ನು ಹೊಂದಿದೆ.

ಅಭ್ಯಾಸ ಹಾಳೆಗಳಲ್ಲಿ ಈ ಕೆಳಗಿನ ಕಲಿಕಾಂಶಗಳ ಮೇಲೆ ಚಟುವಟಿಕೆಗಳನ್ನು ನೀಡಲಾಗಿದೆ:

- ಭಾಷಾ ಅಭ್ಯಾಸ - ಕೇಳುವುದು, ಹೇಳುವುದು, ಓದುವುದು ಮತ್ತು ಬರೆಯುವುದು
- ಬುನಾದಿ ಗಣಿತ - ಎಣಿಕೆ, ಸಂಖ್ಯೆಗಳು, ಚಿತ್ರಾಧಾರಿತ ಮೂಲಭೂತ ಕ್ರಿಯೆಗಳು ಮತ್ತು ಮಾನಸಿಕ ಲೆಕ್ಕಾಚಾರ
- ಸುತ್ತಲ ಪರಿಸರವನ್ನು ಗಮನಿಸುವುದು ಮತ್ತು ಚಿತ್ರ, ಕಥೆ ಮುಂತಾದ ಚಟುವಟಿಕೆಗಳನ್ನು ಬಳಸಿ ವ್ಯಕತಪಡಿಸುವುದು

ಮಕ್ಕಳು ಮೊದಲ ಬಾರಿ ಓದಲು, ಬರೆಯಲು ಕಲಿಯುತ್ತಿರುವುದರಿಂದ, ಚಟುವಟಿಕೆಗಳನ್ನು ಮಾಡಲು ಅವರಿಗೆ ದೊಡ್ಡವರ ಸಹಾಯ ಬೇಕಾಗುತ್ತದೆ.

ದೊಡ್ಡವರು ಪ್ರತಿ ಚಟುವಟಿಕೆಯ ಸೂಚನೆಯನ್ನು ಓದಿ ಹೇಳಬೇಕು. ಮಕ್ಕಳು ಚಟುವಟಿಕೆಗಳನ್ನು ಪ್ರಯತ್ನಿಸಬೇಕು. ಮಕ್ಕಳು ಸಹಾಯ ಕೇಳಿದಾಗ ಮಾತ್ರ ಸಹಾಯ ನೀಡಬೇಕು.

ಒಂದು ವಾರಕ್ಕೆ ನಾಲ್ಕು ಪುಟದಷ್ಟು ಅಭ್ಯಾಸವನ್ನು ಮಕ್ಕಳು ಮಾಡಬೇಕು.

ಚಟುವಟಿಕೆಯನ್ನು ಹೇಗೆ ಮಾಡಬೇಕು ಎಂದು ತೋರಿಸಲು ಈ ಕೆಳಗಿನ ಚಿಹ್ನೆಗಳನ್ನು ಬಳಸಲಾಗಿದೆ:

| | |
|---|---|
| • ಚಟುವಟಿಕೆ |  |
| • ತಿದ್ದುವುದು/ಚಿತ್ರಿಸುವುದು/ಬರೆಯುವುದು |  |
| • ಬಣ್ಣ ತುಂಬುವುದು: |  |
| • ಕೇಳುವುದು |  |
| • ಮಾತಾಡುವುದು: |  |
| • ಪೋಷಕರೊಂದಿಗೆ/ಹಿರಿಯರೊಂದಿಗೆ ಮಾಡಬಹುದಾದ ಚಟುವಟಿಕೆಗಳು |  |

For e-copy and additional instructions:

" We have put our efforts to make this book free of content errors and typos. However, if you happen to find any or have suggestions for improvement, please reach out to us at **feedback@sikshana.org** "


ದಿನಾಂಕ : ____ / ____ / ____


ಎಲ್ಲಾ ವೃತ್ತಗಳನ್ನು ಮಧ್ಯದಲ್ಲಿರುವ ವೃತ್ತಕ್ಕೆ ಜೋಡಿಸಿ:




ದಿನಾಂಕ : _____ / _____ / _____


ಬಸವನ ಹುಳು ಹೂವಿಗೆ ಹೋಗಲು ಸಹಾಯ ಮಾಡಿ:







ಹೂವನ್ನು ಸಸ್ಯಕ್ಕೆ ಜೋಡಿಸಿ:






ತೆರೆದ ಬೆರಳುಗಳಷ್ಟು ಗೆರೆಗಳನ್ನು ಎಳೆಯಿರಿ:






ದಿನಾಂಕ : _____ / _____ / _____

ಇಲ್ಲಿ ಕೆಲವು ವಸ್ತುಗಳು ಇವೆ. ಅವುಗಳ ಹೆಸರುಗಳನ್ನು ಹೇಳಿ.
ಪುಸ್ತಕವನ್ನು ಮುಚ್ಚಿ ಮತ್ತು ನೀವು ನೋಡಿದ ವಸ್ತುಗಳನ್ನು ನೆನಪಿಸಿಕೊಳ್ಳಿ.
ನೀವು ಎಷ್ಟು ಮರೆತಿದ್ದೀರಿ?



ಆಮೆ




ಬೆಕ್ಕು



ಮೊಲ




ಸೈಕಲ್



ಮನೆ



ಚೆಂಡು




ಕಾರು



ಬಕೆಟ್




ಐಸ್ ಕ್ರೀಮ್



ಚಾಕೊಲೇಟ್



ಗಾಜಿನ ಲೋಟ



ಆನೆ

ಈ ಪದ್ಯವನ್ನು ಕಲಿಯಿರಿ ಮತ್ತು ಪಠಿಸಿ :









ಒಂದು ಕಾಡಿನ ಮಧ್ಯದೊಳಗೆ
ಎರಡು ಮರಗಳ ನಡುವೆ ಮಲಗಿ

ಮೂರು ಕರಡಿಗಳಾಡುತಿದ್ದವು
ನಾಲ್ಕು ಮರಿಗಳ ಸೇರಿಸಿ

ಐದು ಜನ ಬೇಟೆಗಾರರು
ಆರು ಬಲೆಗಳನೆಳೆದುಕೊಂಡು




ಏಳು ಕರಡಿಗಳ ಹಿಡಿದು, ನೋಡದೆ
ಎಂಟು ಹಿಡಿದೆವು ಎಂದರು


ಒಂಬತ್ತು ಎಂದನು ಅವರಲೊಬ್ಬ
ಹತ್ತು ಎಂದರು ಬೇರೆಯವರು


ಎಣಿಸಿ ನೋಡಿದರೇಳೆ ಏಳು ಇಲ್ಲಿಗೀ ಕಥೆ ಮುಗಿಯಿತು


ದಿನಾಂಕ : ____ / ____ / ____


ಮೊದಲ ಮುಖವನ್ನು ನೋಡಿ. ಇತರ ಚಿತ್ರಗಳಲ್ಲಿ ಮುಖದ ಕಾಣೆಯಾದ ಭಾಗಗಳನ್ನು ಎಳೆಯಿರಿ.














ದಿನಾಂಕ : ____ / ____ / ____


ಈ ಸನ್ನೆಗಳ ಅರ್ಥವನ್ನು ಹೇಳಿ:










ಚಿತ್ರಗಳನ್ನು ಪೂರ್ಣಗೊಳಿಸಿ ಮತ್ತು ಬಣ್ಣ ಹಚ್ಚಿರಿ:









ದಿನಾಂಕ : _____ / _____ / _____

ಪ್ರತಿ ಚಿತ್ರದಲ್ಲಿನ ಪ್ರತಿಯೊಂದು ಆಕಾರಕ್ಕೆ ಒಂದರಂತೆ ಪೆಟ್ಟಿಗೆಯಲ್ಲಿ ಚುಕ್ಕೆ ಬರೆಯಿರಿ:



ಪ್ರತಿ ತಟ್ಟೆಯಲ್ಲಿ ಒಂದು ಲೋಟವನ್ನು ಹಾಕಿ:



ಒಂದೇ ಸಂಖ್ಯೆಯ ವಸ್ತುಗಳನ್ನು ಹೊಂದಿರುವ ಚಿತ್ರಗಳನ್ನು ಸೇರಿ:



ದಿನಾಂಕ : ____ / ____ / ____

ಚಿತ್ರವನ್ನು ಗಮನಿಸಿ ಹೇಳಿರಿ:



- ಅವರು ಮಗುವಿಗೆ ಏನು ಮಾಡುತ್ತಿದ್ದಾರೆ?

---

- ನೀವು ಪೋಲಿಯೊ ಲಸಿಕೆ ಪಡೆದದ್ದು ನೆನಪಿದೆಯೇ?

---

- ಗಿಳಿ ಎಲ್ಲಿದೆ?

---

- ಅಳಿಲು ಎಲ್ಲಿದೆ?

---

- ಮೀನಾ ಮಗುವಿನ ಸಹೋದರಿ. ಆಕೆ ಎಲ್ಲಿರುವಳು?

---

- ಬಾಬು ಮಗುವಿನ ಸಹೋದರ. ಅವನು ಎಲ್ಲಿದ್ದಾನೆ?

---

- ನಿಮಗೆ ಸಹೋದರ ಅಥವಾ ಸಹೋದರಿ ಇದ್ದಾರೆಯೇ?


---

- ನೀವು ಅವನನ್ನು ಅಥವಾ ಅವಳನ್ನು ಏನು ಕರೆಯುತ್ತೀರಿ?


---

ದಿನಾಂಕ : _____ / _____ / _____

ಉದ್ದವಾದ ರೈಲು, ಎತ್ತರದ ಮನೆ ಮತ್ತು ಉದ್ದವಾದ ರಾಕೆಟ್ ಅನ್ನು ಬಣ್ಣ ಮಾಡಿ:




ಚಿಕ್ಕ ಚಾಪೆಯನ್ನು ಬಣ್ಣ ಮಾಡಿ:



ದಿನಾಂಕ : ____ / ____ / ____


ಪೊದೆಯ ಹಿಂದೆ ಯಾರು ಕಾಣದ ಹಾಗೆ ಅಡಗಿಕೊಳ್ಳಬಹುದು ಎಂಬುದನ್ನು ತೋರಿಸಲು (✓) ಟಿಕ್ ಗುರುತು ಹಾಕಿ.



ದಿನಾಂಕ : ____ / ____ / ____


ಸಂತೋಷ, ದುಃಖ ಮತ್ತು ಕೋಪದ ಮುಖಗಳನ್ನು ಗುರುತಿಸಿ.
ಕೆಳಗಿನ ವೃತ್ತಗಳಲ್ಲಿ ಮುಖಗಳನ್ನು ಬರೆಯಿರಿ:





ಇನ್ನೂ ಕೆಲವು ಪ್ರಾಣಿಗಳ ಮುಖಗಳನ್ನು ಚಿತ್ರಿಸಿ ಅಥವಾ ನೀಡಿರುವ ಮುಖಗಳನ್ನು ನಕಲಿಸಿ:





ದಿನಾಂಕ : ____ / ____ / ____

ಈ ಪದ್ಯವನ್ನು ಕಲಿಯಿರಿ ಮತ್ತು ಪಠಿಸಿ:



ತೋಟಕೆ ಹೋಗೋ ತಿಮ್ಮ, ತೋಳ ಬಂದೀತಮ್ಮ
ಹಸು ಮೇಯಿಸೊ ತಿಮ್ಮ, ಹಸು ಹಾದೀತಮ್ಮ


ಒಲೆ ಉರಿಸೋ ತಿಮ್ಮ, ಉರಿ ಸುಟ್ಟೀತಮ್ಮ
ಪಾಠ ಬರೆಯೋ ತಿಮ್ಮ, ಬಳಪ ಇಲ್ಲ ಅಮ್ಮ


ನೀರು ಸೇದೋ ತಿಮ್ಮ, ಕೈಯ್ಯಿ ನೋವು ಅಮ್ಮ
ಕಾವಲಿ ತಾರೋ ತಿಮ್ಮ, ಕಾಲು ನೋವು ಅಮ್ಮ

ಹೂವು ಬಿಡಿಸೊ ತಿಮ್ಮ, ಹಾವು ಬಂದೀತಮ್ಮ
ಊಟಕೆ ಬಾರೋ ತಿಮ್ಮ, ಓಡಿ ಬಂದೆನಮ್ಮ

ದಿನಾಂಕ : ____ / ____ / ____


ಎಡಗಡೆ ಇರುವ ಚಿತ್ರಗಳನ್ನು ಬಲಗಡೆ ಇರುವ ಚಿತ್ರಗಳಿಗೆ ಹೊಂದಿಸಿ.
ಹೊಂದದೆ ಉಳಿದ ಚಿತ್ರವನ್ನು ಕ್ರಾಸ್ ಮಾಡಿ.








ದಿನಾಂಕ : ____ / ____ / ____

ಒಂದೇ ರೀತಿಯ ಚಿತ್ರಗಳಿಗೆ ಒಂದೇ ಬಣ್ಣ ತುಂಬಿಸಿ:















ಸ್ವಲ್ಪ ಮಣ್ಣು ಅಥವಾ ಮರಳನ್ನು ತೆಗೆದುಕೊಳ್ಳಿ.




ಸ್ವಲ್ಪ ನೀರಿನೊಂದಿಗೆ ಮಿಶ್ರಣ ಮಾಡಿ.




ಗಾಜಿನ ಬಟ್ಟಲಿನಲ್ಲಿ ಒದ್ದೆ ಮಣ್ಣನ್ನು ಒತ್ತಿರಿ



ಗಾಜನ್ನು ತಲೆಕೆಳಗಾಗಿ ಹಾಕಿ.




ನಿಧಾನವಾಗಿ ಗಾಜನ್ನು ಮೇಲಕ್ಕೆ ಎಳೆಯಿರಿ.




ಏನು ಕಾಣಿಸುತ್ತಿದೆ?

ದಿನಾಂಕ : _____ / _____ / _____

ಈ ಕೆಳಗಿನ ರೇಖೆಗಳನ್ನು ಪೆನ್ಸಿಲ್‌ನಿಂದ ಅಥವಾ ಬೆರಳಿನಿಂದ ತಿದ್ದಿ.



ಕಡ್ಡಿಗಳನ್ನು ಕತ್ತರಿಸಿ ಈ ಆಕಾರಗಳನ್ನು ಮಾಡಿ:



ದಿನಾಂಕ : ____ / ____ / ____

ಚಿತ್ರವನ್ನು ಗಮನಿಸಿ ಹೇಳಿರಿ:




- ರಾಜು ಎಲ್ಲಿ?

______________________________

- ಅವನು ಏನು ಆಡುತ್ತಿದ್ದಾನೆ?

______________________________

- ಅವನ ಹಿಂದೆ ಏನು ಬರುತ್ತಿದೆ?

______________________________

- ಅವನಿಗೆ ಹಿಂದೆ ಇರುವ ಬಸ್ಸು ಕಾಣಿಸುತ್ತಿದೆಯೇ?

______________________________

- ಡ್ರೈವರ್ ರಾಜುವನ್ನು ನೋಡದಿದ್ದರೆ ಏನಾಗಬಹುದು?


______________________________


- ಆಟವಾಡಲು ಸುರಕ್ಷಿತ ಸ್ಥಳಗಳು ಯಾವುವು?


______________________________

ದಿನಾಂಕ : ____ / ____ / ____

ಸಂಖ್ಯೆಗಳನ್ನು ಬರೆಯಲು ಕಲಿಯಿರಿ:







ದಿನಾಂಕ : ____ / ____ / ____

ಬಟ್ಟೆಯ ತುಂಡನ್ನು ತೆಗೆದುಕೊಂಡು, ಅದರ ಒಂದು ತುದಿಯನ್ನು ಗಾಜಿನ ಲೋಟ ಅಥವಾ ಮಗ್ ನೀರಿನಲ್ಲಿ ಹಾಕಿ ಮತ್ತು ಇನ್ನೊಂದು ತುದಿಯನ್ನು ಬಟ್ಟಲಿಗೆ ಅಥವಾ ಗಿಡಕ್ಕೆ ಹಾಕಿ.

ಸ್ವಲ್ಪ ಸಮಯದ ನಂತರ ನೀವು ಏನು ಗಮನಿಸುತ್ತೀರಿ? ಪೋಷಕರೊಂದಿಗೆ ಚರ್ಚಿಸಿ.





ಈ ಆಕಾರಗಳನ್ನು ಪತ್ತೆಹಚ್ಚಿ, ಚಿತ್ರಿಸಿ ಮತ್ತು ಬಣ್ಣ ಮಾಡಿ:





ದಿನಾಂಕ : _____ / _____ / _____

ಸಂಖ್ಯೆಗಳನ್ನು ಬರೆಯಲು ಕಲಿಯಿರಿ:









ದಿನಾಂಕ : _____ / _____ / _____

ಚಿತ್ರವನ್ನು ಗಮನಿಸಿ ಹೇಳಿರಿ:



- ಮಕ್ಕಳು ಏನು ಮಾಡುತ್ತಿದ್ದಾರೆ?

---

- ಮೀನಾಳು ಬಾಬುವಿನ ಸಹೋದರಿ. ಮೀನಾ ಎಲ್ಲಿದ್ದಾಳೆ?

---

- ಅವಳು ಏನು ಮಾಡುತ್ತಿದ್ದಾಳೆ?

---

- ತಾಯಿ ಏನು ಮಾಡುತ್ತಿದ್ದಾರೆ?

---

- ಬಾಬು ತನ್ನ ಕಣ್ಣುಗಳಲ್ಲಿ ಏನು ಧರಿಸಿದ್ದಾನೆ?

---

- ನಿಮ್ಮ ಮನೆಕೆಲಸದಲ್ಲಿ ನಿಮಗೆ ಯಾರು ಸಹಾಯ ಮಾಡುತ್ತಾರೆ?

---

ದಿನಾಂಕ : ____ / ____ / ____

ರಾಮು ಬೆಳಿಗ್ಗೆ ಏನು ಮಾಡುತ್ತಾನೆ ಎಂಬುದನ್ನು ಚಿತ್ರಗಳಲ್ಲಿ ನೀಡಲಾಗಿದೆ.

ಆದರೆ ಚಿತ್ರಗಳು ಸರಿಯಾದ ಕ್ರಮದಲ್ಲಿಲ್ಲ.

ಸರಿಯಾದ ಕ್ರಮ ಸೂಚಿಸಲು ಸಂಖ್ಯೆಗಳನ್ನು ಬರೆಯಿರಿ.










---

ಚಿತ್ರವನ್ನು ಗಮನಿಸಿ ಹೇಳಿರಿ:



- ಎಡಭಾಗದಲ್ಲಿರುವ ಗಾಜಿನಲ್ಲಿ ಏನಿದೆ?

___

- ಬಲಭಾಗದಲ್ಲಿರುವ ಗಾಜಿನಲ್ಲಿ ಏನಿದೆ?

___

- ನೀವು ಮಂಜುಗಡ್ಡೆಗಳನ್ನು ನೋಡಿದ್ದೀರಾ? ಎಲ್ಲಿ?

___

- ಮಂಜುಗಡ್ಡೆ ಕರಗಿದಾಗ ನೀವು ಏನು ಪಡೆಯುತ್ತೀರಿ?

___

- ಮಂಜುಗಡ್ಡೆ ಅನ್ನು ಸ್ಪರ್ಶಿಸಲು ಹೇಗೆ ಅನಿಸುತ್ತದೆ?

___

- ನೀವು ಎಂದಾದರೂ ಹಣ್ಣಿನ ರಸ ಅಥವಾ ನೀರಿಗೆ ಮಂಜುಗಡ್ಡೆ ಹಾಕಿ ಕುಡಿದಿದ್ದೀರಾ?

___

- ನೀವು ಐಸ್ ಕ್ಯಾಂಡಿ ತಿಂದಿದ್ದೀರಾ?

___

- ಮಂಜುಗಡ್ಡೆ ಅಥವಾ ಐಸ್ ಅನ್ನು ಹೇಗೆ ತಯಾರಿಸಲಾಗುತ್ತದೆ ಎಂದು ನಿಮಗೆ ತಿಳಿದಿದೆಯೇ?


___

ದಿನಾಂಕ : _____ / _____ / _____


ಈ ವಸ್ತುಗಳನ್ನು ಹೆಸರಿಸಿ :



















ಚಿಟ್ಟೆ ಗುಲಾಬಿಯನ್ನು ತಲುಪಲು ಸಹಾಯ ಮಾಡಿ :








ದಿನಾಂಕ : _____ / _____ / _____


ಚಿತ್ರಗಳನ್ನು ಪೂರ್ಣಗೊಳಿಸಿ ಮತ್ತು ಬಣ್ಣ ಹಚ್ಚಿರಿ:















ದಿನಾಂಕ : ____ / ____ / ____


ಪ್ರತಿ ಆಕೃತಿಯ ಮೇಲೆ ರೇಖೆಗಳನ್ನು ಎಳೆದು,
ಅವುಗಳನ್ನು ಸಮಾನವಾಗಿ ಎರಡು ಭಾಗಗಳಾಗಿ ವಿಂಗಡಿಸಿ:























ದಿನಾಂಕ : ____ / ____ / ____

ಈ ಪದ್ಯವನ್ನು ಕಲಿಯಿರಿ ಮತ್ತು ಪಠಿಸಿ:

ಹೂವನು ಮಾರುತ ಹೂವಾಡಿಗಿತ್ತಿ ಹಾಡುತ ಬರುತಿಹಳು |
ಘಮ ಘಮ ಹೂಗಳು ಬೇಕೇ ಎನುತ ಹಾಡುತ ಬರುತಿಹಳು ||

ಬಿಳುಪಿನ ಮಲ್ಲಿಗೆ, ಹಳದಿಯ ಸಂಪಿಗೆ, ಹಸುರಿನ ಹೊಸ ಮರುಗ |
ಹಾಕಿ ಕಟ್ಟಿರುವೇ ಬೇಕೇ ಎನುತ ಹಾಡುತ ಬರುತಿಹಳು.. ||

ಹೊಸ ಸೇವಂತಿಗೆ ಹೊಸ ಇರುವಂತಿಗೆ ಅರಿಸಿನ ತಾಳೆಯಿದೆ |
ಅಚ್ಚ ಮಲ್ಲೆಯಲಿ ಪಚ್ಚೆ ತೆನೆಗಳು ಸೇರಿದ ಮಾಲೆಯಿದೆ ||




ಕಂಪನು ಚೆಲ್ಲುವ ಕೆಂಪು ಗುಲಾಬಿ ಅರಳಿದ ಹೊಸ ಕಮಲ |
ಬಿಳುಪಿನ ಜಾಜಿ ಹಳದಿಯ ಜಾಜಿ ಅರಳಿದ ಬಿಳಿ ಕಮಲ ||

ಹಾಕಿ ಕಟ್ಟಿರುವೇ ಬೇಕೇ ಎನುತ ಹಾಡುತ ಬರುತಿಹಳು |
ಹೂವನು ಮಾರುತ ಹೂವಾಡಿಗಿತ್ತಿ ಹಾಡುತ ಬರುತಿಹಳು ||

---

ಈ ಪದ್ಯವನ್ನು ಕಲಿಯಿರಿ ಮತ್ತು ಪಠಿಸಿ:

ಬಸ್ಸು ಬಂತು ಬಸ್ಸು
ಗವರ್ನಮೆಂಟ್ ಬಸ್ಸು
ಕೆಂಪು ಬಿಳಿ ಬಣ್ಣ ನೋಡುಬಾರಣ್ಣ ||



ಆರು ಚಕ್ರ ಇರುವುದು
ಎರಡು ಲೈಟು ಉರಿಯುವುದು
ನಾನ್ ಕಂಡಕ್ಟರ್ ಆಗುವೆ
ರೈಟ್ ರೈಟ್ ಹೇಳುವೆ
ಸೀಟಿಯನ್ನು ಊದುವೆ ||

ದಿನಾಂಕ : ____ / ____ / ____

ಕ್ರಿಯೆಯ ಪದಗಳನ್ನು ಆಲಿಸಿ ಮತ್ತು ಪುನರಾವರ್ತಿಸಿ:



ತಿನ್ನುವುದು



ಕುಳಿತುಕೊಳ್ಳುವುದು



ಓದುವುದು



ಓದುವುದು



ಆಟ ಆಡುವುದು




ಮಲಗುವುದು


---

ರೇಖೆಗಳ ಹಿಂದೆ ಯಾರು ಅಡಗಿದ್ದಾರೆ?










ದಿನಾಂಕ : _____ / _____ / _____

ಪ್ರತಿ ಸಂಖ್ಯೆಯನ್ನು ತೋರಿಸಲು ವೃತ್ತಗಳನ್ನು ಎಳೆಯಿರಿ:

| | | | | | |
|---|---|---|---|---|---|
| 4 | ○ | ○ | ○ | ○ | |
| 1 | | | | | |
| 5 | | | | | |
| 2 | | | | | |
| 3 | | | | | |

ಆಕಾರಗಳನ್ನು ನೋಡಿ ಪಕ್ಕದಲ್ಲಿ ಬಿಡಿಸಿ:




ದಿನಾಂಕ : ____ / ____ / ____

ಈ ಚಿತ್ರಗಳಲ್ಲಿ ಮಕ್ಕಳು ಏನು ಮಾಡುತ್ತಿದ್ದಾರೆ?

ನಿಮ್ಮ ಕೈಗಳನ್ನು ಚೆನ್ನಾಗಿ ತೊಳೆಯುವುದು ಹೇಗೆ ಎಂದು ನಿಮಗೆ ತಿಳಿದಿದೆಯೇ?

ಕೆಳಗಿನ ಚಿತ್ರಗಳಲ್ಲಿನ ವಿಧಾನವನ್ನು ಅನುಸರಿಸಿ:




ಕೆಳಗಿನ ಸಂದರ್ಭಗಳಲ್ಲಿ ನೀವು ಕೈಗಳನ್ನು ತೊಳೆಯಬೇಕು. ನೀವು ನಿತ್ಯ ಮಾಡುತ್ತೀರಾದರೆ ✓ ಟಿಕ್ ಮಾರ್ಕ್ ಮಾಡಿ.


- ಆಡಿದ ನಂತರ ☐
- ತಿನ್ನುವ ಮೊದಲು ☐
- ಶೌಚಾಲಯವನ್ನು ಬಳಸಿದ ನಂತರ ☐
- ಪ್ರಾಣಿಯನ್ನು ಮುಟ್ಟಿದ ನಂತರ (ನಾಯಿ, ಬೆಕ್ಕು, ಹಸು, ಮೇಕೆ, ಇತ್ಯಾದಿ) ☐

ದಿನಾಂಕ : ____ / ____ / ____


ಸಂಖ್ಯೆಗಳನ್ನು ಎಣಿಸಿ ಮತ್ತು ಬರೆಯಿರಿ:




ಎಷ್ಟು ಚಿತ್ರಗಳಿವೆಯೋ ಅಷ್ಟು ಚುಕ್ಕಿಗಳನ್ನು ಬರೆಯಿರಿ:





ಕೆಳಗಿನ ಚಿತ್ರಗಳನ್ನು ಸರಿಯಾದ ಸಂಖ್ಯೆಗಳಿಗೆ ಜೋಡಿಸಿ:



ದಿನಾಂಕ : ____ / ____ / ____

ಕೆಳಗಿನ ಪದಗಳು 'ಮ' ಧ್ವನಿಯಿಂದ ಪ್ರಾರಂಭವಾಗುತ್ತವೆ.
'ಮ' ಇಂದ ಪ್ರಾರಂಭವಾಗುವ 5 ಪದಗಳನ್ನು ಹೇಳಿ.



ಮಂಚ


ಮೊಸಳೆ


ಬೆಂಕಿ


ಮೋಡ


ಮಲ್ಲಿಗೆ


ಮನುಷ್ಯ

---


ಇಲ್ಲಿ ಏನು ನಡೆಯುತ್ತಿದೆ? ಚಿತ್ರವನ್ನು ಗಮನಿಸಿ ಹೇಳಿ:




- ಮಕ್ಕಳು ಏನು ಮಾಡುತ್ತಿದ್ದಾರೆ?
- ನೀವು ಎಲೆಯನ್ನು ತಂದು ಅದರ ಸುತ್ತಲೂ ಗೆರೆ ಎಳೆಯಬಹುದು.
- ನೀವು ಹೊರಗಿನ ಮರವನ್ನು ನೋಡಬಹುದು ಮತ್ತು ಅದನ್ನು ಇಲ್ಲಿ ಚಿತ್ರಿಸಬಹುದು.

ದಿನಾಂಕ : _____ / _____ / _____


ಚಿತ್ರಗಳನ್ನು ಸರಿಯಾದ ಸಂಖ್ಯೆಗಳಿಗೆ ಜೋಡಿಸಿ:




ಚಿತ್ರಗಳಿಗೆ ಸರಿಹೊಂದುವ ಸಂಖ್ಯೆಗಳನ್ನು ಬರೆಯಿರಿ:





ಅನುಗುಣವಾದ ಸಂಖ್ಯೆಗಳಿಗೆ ಚಿತ್ರಗಳನ್ನು ಸೇರಿಸಿ. ಪೆಟ್ಟಿಗೆಗಳಲ್ಲಿ ಸಂಖ್ಯೆಗಳನ್ನು ಎಣಿಸಿ ಮತ್ತು ಬರೆಯಿರಿ:



ದಿನಾಂಕ : ____ / ____ / ____

ಎಷ್ಟು ಮಕ್ಕಳು ಓಡುತ್ತಿದ್ದಾರೆ?







ಎಷ್ಟು ಮಕ್ಕಳು ಓದುತ್ತಿದ್ದಾರೆ?





ಎಷ್ಟು ಮಕ್ಕಳು ಈಜುತ್ತಿದ್ದಾರೆ?



ದಿನಾಂಕ : _____ / _____ / _____

ನಿಮ್ಮ ಪೋಷಕರ ಸಹಾಯದಿಂದ ವೃತ್ತ, ಚೌಕ ಮತ್ತು ಆಯತದ ಆಕಾರದಲ್ಲಿರುವ ವಸ್ತುಗಳನ್ನು ಹುಡುಕಿ. ಈ ಆಕಾರಗಳನ್ನು ಬಣ್ಣ ಮಾಡಿ:





ದಿನಾಂಕ : ____ / ____ / ____

ಇಲ್ಲಿ ಏನಾಗುತ್ತಿದೆ? ಚಿತ್ರ ನೋಡಿ ಹೇಳಿ:




ಇವುಗಳಲ್ಲಿ ಯಾವುದು ಚಾಕೊಲೇಟ್?










ಗಾಜು, ಅಥವಾ ಬಳೆ ಅಥವಾ ಮುಚ್ಚಳದಂತಹ ವಸ್ತುಗಳನ್ನು ತೆಗೆದುಕೊಳ್ಳಿ. ವಿವಿಧ ಗಾತ್ರದ ವೃತ್ತಗಳನ್ನು ಪಡೆಯಲು ಅವುಗಳ ಸುತ್ತಲೂ ಗೆರೆ ಎಳೆಯಿರಿ.


ದಿನಾಂಕ : ____ / ____ / ____


ಪ್ರತಿ ಹುಳುವನ್ನು ಅದರ ನೆರಳಿನೊಂದಿಗೆ ಜೋಡಿಸಿ:



ದಿನಾಂಕ : ____ / ____ / ____

ಆಹಾರ ಪದಾರ್ಥಗಳನ್ನು ಗುರುತಿಸಿ.
ಆರೋಗ್ಯಕರ ಆಹಾರ ಪದಾರ್ಥಗಳನ್ನು ಹಸಿರು ಬಣ್ಣ ಹಚ್ಚಿ ಗುರುತಿಸಿ:.



ಜೋಳ


ಬಾಳೆಹಣ್ಣು



ತಂಪು ಪಾನೀಯ



ಗೋಡಂಬಿ




ಚಿಪ್ಸ್



ಹಾಲು


ಐಸ್ ಕ್ರೀಮ್


ಪಾನಿ ಪುರಿ


ಸಮೋಸಾ


ಕ್ಯಾರೆಟ್



ಕ್ಯಾಂಡಿ



ಕೇಕ್

ದಿನಾಂಕ : ____ / ____ / ____

ಈ ಪದ್ಯವನ್ನು ಕಲಿಯಿರಿ ಮತ್ತು ಪಠಿಸಿ:


ಆಚೆ ಮನೆಯ ಸುಬ್ಬಮ್ಮನಿಗೆ
ಏಕಾದಶಿ ಉಪವಾಸ |
ಎಲ್ಲೊ ಸ್ವಲ್ಪ ತಿಂತಾರಷ್ಟೇ
ಉಪ್ಪಿಟ್ಟು ಅವಲಕ್ಕಿ ಪಾಯಸ ||







ಮೂರೋ ನಾಲ್ಕೋ ಬಾಳೆಹಣ್ಣು
ಸ್ವಲ್ಪ ಚಕ್ಕುಲಿ ಕೋಡುಬಳೆ |
ಘಂಟೆಗೆ ಎರಡೆ ಸೀಬೆ ಹಣ್ಣು
ಆಗಾಗ ಒಂದೊಂದು ಕಿತ್ತಳೆ ||

ಮಧ್ಯಾನಕೆಲ್ಲ ರವೆ ಉಂಡೆ
ಹುರುಳಿ ಕಾಳಿನ ಉಸಲಿ |
ಎಲ್ಲೊ ಸ್ವಲ್ಪ ಬಿಸಿ ಸಂಡಿಗೆ
ಐದೊ ಆರೋ ಇಡ್ಲಿ ||






ರಾತ್ರಿ ಗೆ ಪಾಪ ಉಪ್ಪಿಟ್ಟೇ ಗತಿ
ಒಂದ್ ಲೋಟದ ತುಂಬಾ ಹಾಲು |
ಪಕ್ಕದ ಮನೆಯ ರಾಮೇ ಗೌಡರ
ಸೀಮೆ ಹಸುವಿನ ಹಾಲು ||




ದಿನಾಂಕ : ____ / ____ / ____


ನೀವು ಯಾವ ಹಣ್ಣುಗಳನ್ನು ಇಷ್ಟಪಡುತ್ತೀರಿ? ಈ ಕೆಳಗಿನ ಹೆಸರುಗಳನ್ನು ಜೋರಾಗಿ ಹೇಳಿ.




ನಿಮ್ಮ ಅಂಗೈ ಸುತ್ತಲೂ ಕಾಗದದಲ್ಲಿ ಅಥವಾ ನೆಲದ ಮೇಲೆ ಗೆರೆ ಎಳೆಯಿರಿ.
ಅದರ ಪಕ್ಕದಲ್ಲಿ ನಿಮ್ಮ ತಾಯಿಯ ಅಂಗೈಯನ್ನು ಇಟ್ಟು ಗೆರೆ ಎಳೆಯಿರಿ.
ಅವುಗಳಲ್ಲಿ ಚಿತ್ರಗಳನ್ನು ಬಿಡಿಸಿ.











ದಿನಾಂಕ : ____ / ____ / ____

ಚಿತ್ರಗಳನ್ನು ಪೂರ್ಣಗೊಳಿಸಿ ಮತ್ತು ಬೇರೆ ಬೇರೆ ರೀತಿಯಲ್ಲಿ ಬಣ್ಣ ತುಂಬಿಸಿ:



ಇರುವೆ ಹೇಗೆ ಸಿಹಿಯನ್ನು ತಲುಪಬಹುದು? ಎಲ್ಲಾ ಮಾರ್ಗಗಳನ್ನು ಪತ್ತೆಹಚ್ಚಿ:




ಚಿತ್ರಗಳನ್ನು ಪೂರ್ಣಗೊಳಿಸಿ:



ದಿನಾಂಕ : _____ / _____ / _____

ನೀವು ವಿವಿಧ ರೀತಿಯ ಡ್ರೆಸ್‌ಗಳನ್ನು ಧರಿಸುತ್ತೀರಿ ಅವುಗಳು. ವಿಭಿನ್ನ ಬಣ್ಣಗಳು ಮತ್ತು ಮಾದರಿಗಳನ್ನು ಹೊಂದಿವೆ. ಈ ಕೆಳಗಿನ ಉಡುಪುಗಳಿಗೆ ನಿಮ್ಮದೇ ಆದ ಕೆಲವು ವಿನ್ಯಾಸಗಳನ್ನು ಮಾಡಿ ಮತ್ತು ಬಣ್ಣ ಮಾಡಿ.





---


ಚಿತ್ರವನ್ನು ಗಮನಿಸಿ ಹೇಳಿರಿ:



- ಹುಡುಗಿಯ ಹೆಸರು ಚಿನ್ನಿ. ______________________________
- ಅವಳು ಏನು ಮಾಡುತ್ತಿದ್ದಾಳೆ? ______________________________
- ಯಾರು ಅವಳಿಗೆ ಊಟ ಹಾಕುತ್ತಿದ್ದಾರೆ? ______________________________
- ಅವಳು ಏನು ತಿನ್ನುತ್ತಿದ್ದಾಳೆ? ______________________________
- ಅವರು ಎಲ್ಲಿ ಕುಳಿತಿದ್ದಾರೆ? ______________________________
- ಚಿನ್ನಿಯ ಪಕ್ಕದ ತಟ್ಟೆಯಲ್ಲಿ, ಒಲೆಯ ಹತ್ತಿರ ಏನು ಇಡಲಾಗಿದೆ? ______________________________
- ಯಾವ ವಸ್ತುಗಳನ್ನು ಅವರು ಗೋಡೆಗೆ ನೇತುಹಾಕಿದ್ದಾರೆ? ______________________________

‘ಒಂದು ಮಗುವನ್ನು ಬೆಳೆಸಲು ಒಂದು ಗ್ರಾಮವೇ ಬೇಕು’

**ಮಕ್ಕಳಲ್ಲಿ ಬುನಾದಿ ಹಂತದ ಸಾಮರ್ಥ್ಯಗಳನ್ನು ಬೆಳೆಸಬೇಕಾದರೆ,**
**ಶಿಕ್ಷಕರು, ಪೋಷಕರೊಂದಿಗೆ ಇಡೀ ಸಮುದಾಯ ಸಕ್ರಿಯ ಪಾತ್ರ ವಹಿಸಬೇಕಾಗುತ್ತದೆ.**



Sikshana FOUNDATION
Love of learning

+91 80 26629890
info@sikshana.org
www.sikshana.org
# 41, K. R. Road, Basavangudi
Bengaluru – 560004, Karnataka